ಎನ್ನುವ ಭರವಸೆಯ ಬೆಳಕಿನ ಕೋಲು ಎದೆಯ ಯಾವುದೋ ಮೂಲೆಯಿಂದ ಬೆಳಕು ಚೆಲ್ಲುತ್ತಿತ್ತು. ಆಫೀಸಿನಲ್ಲಿ ಅಂಜಲಿ ಇರಲಿಲ್ಲ. ಸಂಜೆಯ ಕಾಫಿಗೂ ಮೊದಲೇ ಅಂಜಲಿ ಹೊರಟಳೆಂದು ಸೆಕ್ಯೂರಿಟಿ ಹೇಳಿದ. ಗಡಿಯಾರ ಸಮಯವನ್ನು ನಾಲ್ಕೂವರೆ ತೋರಿಸುತ್ತಿತ್ತು. ಅಭಿಜಿತನೂ ಸೀದಾ ತನ್ನ ಕಾರನ್ನು ಕಬ್ಬನ್ ಪಾರ್ಕ್ ಕಡೆಗೆ ತಿರುಗಿಸಿದ. ಬೆಂಗಳೂರಿನ ಟ್ರಾಫಿಕ್ ದಾಟಿ ಕಬ್ಬನ್ ಪಾರ್ಕ್ ತಲುಪುವ ಹೊತ್ತಿಗೆ ಅದಾಗಲೇ ಗಂಟೆ ಐದಾಗಿತ್ತು.

ಕಬ್ಬನ್ ಪಾರ್ಕಿನ ಒಂದು ಐಸ್‌ಕ್ರೀಮ್ ಅಂಗಡಿಯ ಎದುರು ಏಳು ವರ್ಷದ ಸುಹಾಸ ನಿಂತಿದ್ದ. ದೂರದಿಂದಲೇ ಅಭಿಜಿತ ನಡೆದು ಬರುತ್ತಿರುವುದನ್ನು ಗಮನಿಸಿದ ಅಂಜಲಿ ಒಳಗೆ ಹೂವಾದಳು. ಇದುವರೆಗೂ ಬದುಕಿನ ಎಲ್ಲ ಕಠಿಣ ಸಮಯವನ್ನೂ ಕೇವಲ ಮಾತಿನಿಂದಲೇ ನಿಭಾಯಿಸಿದ್ದ ಅಭಿಜಿತ ಮೊದಲ ಬಾರಿಗೆ ತಾನು ಮಾತನಾಡಬೇಕು ಎನ್ನುವುದನ್ನು ಅಂದಾಜು ಮಾಡುತ್ತಿದ್ದ. ಅವರಿಬ್ಬರಿಗೆ ಒಂದೊಂದೇ ಹೆಜ್ಜೆಗಳ ಮೂಲಕ ಹತ್ತಿರವಾಗುತ್ತಿದ್ದ ಅಭಿಜಿತ ಸೀದಾ ಐಸ್ ಕ್ರೀಮ್ ಅಂಗಡಿಯ ಎದುರು ನಿಂತು 'ಒಂದು ಚಾಕೋಬಾರ್ ಕೊಡಿ' ಎಂದು ಕೊಂಡವನು ಸುಹಾಸನಿಗೆ ನೀಡಿದ. ಒಂದು ಕ್ಷಣ ಅವಾಕ್ಕಾದ ಸುಹಾಸ ಹಿಂದೆ ನಿಂತಿದ್ದ ತನ್ನ ಅಮ್ಮನ ಕಡೆಗೆ ತಿರುಗಿದರೆ ತಗೋ ಎಂದು ಅಂಜಲಿ ಕಣ್ಣಿನಲ್ಲೇ ಹೇಳಿದಳು.

'ನಾನು ಹೇಳಿದೆ ಅಲ್ವಾ? ನಿನ್ನ ನೋಡೋಕೆ ಯಾರೋ ಬರ್ತಾರೆ ಅಂತ ಇವರೇ ಅವರು' ಎಂದು ಮಾತು ಆರಂಭಿಸಿದಳು. ಐಸ್‌ಕ್ರೀಮ್‌ಗಿದ್ದ ಹೊರ ಕವರ್ ತೆಗೆಯುತ್ತಾ ಸುಹಾಸ ತನ್ನ ಕುತ್ತಿಗೆಯನೆತ್ತಿ ಅಭಿಜಿತನ ಕಡೆಗೆ ಮೊದಲ ಬಾರಿಗೆ ಸ್ಪಷ್ಟವಾಗಿ ನೋಡಿದ. ಒಂದು ಮಗುವಿನ ತಾಯಿಯಾದ ಅಂಜಲಿ ಒಂದೊಮ್ಮೆ ತನ್ನನ್ನು ಮದುವೆಯಾಗಲು ಒಪ್ಪಿದರೆ ಮುಂದೆ ಬರುವ ಎಲ್ಲವನ್ನೂ ಹೇಗೆ ಸಲೀಸಾಗಿ ನಿಭಾಯಿಸಬೇಕು ಎನ್ನುವ ತಯಾರಿಯಲ್ಲಿ ಸುಹಾಸನ ಪ್ರಶ್ನೆಗಳನ್ನು ಎದುರುಗೊಳ್ಳುವುದು ಮರೆತೇಹೋಗಿತ್ತು.

ಅಂಜಲಿ ಮತ್ತು ಅಭಿಜಿತ ಸಮಾನ ಸ್ಥಿತಿಯಲ್ಲಿದ್ದರು. ಇಬ್ಬರಿಗೂ ಜೊತೆಯಾಗಿರಬೇಕು ಎನ್ನುವುದಷ್ಟೇ ತಿಳಿದಿತ್ತು. ಆದರೆ ಆ ಸಂಬಂಧಕ್ಕಿರಬಹುದಾದ ಯಾವ ಹೆಸರು ಅವರಿಬ್ಬರಿಗೂ ತಿಳಿದಿರಲಿಲ್ಲ. ಅಭಿಜಿತನೇ ಸುಹಾಸನನ್ನು ಒಂದಿಷ್ಟು ಮಾತನಾಡಿಸಿದ, ಕ್ಲೀಷೆಯಂತೆ ಏನು ಓದುತ್ತಿದ್ದಿಯಾ? ಅಮ್ಮ ಇಷ್ಟನಾ? ನಿನ್ನ ಫ್ರೆಂಡ್ಸ್ ಯಾರು? ಹೀಗೆ ತನಗೇ ಇಷ್ಟವಾಗದಂಥ ಮಾತುಗಳನ್ನು ಹೇಳುತ್ತಾ ಹೋದ. ಪಾಪ್‌ಕಾರ್ನ್ ಕೊಡಿಸಿದ, ಸುಹಾಸನ ಎಳೆಯ ಭುಜಗಳನ್ನು ಸವರುತ್ತಾ ಒಂದಿಷ್ಟು ಸಮಯ ಏನನ್ನೂ ಮಾತನಾಡದೆ ಸುಮ್ಮನೇ ಉಳಿದುಬಿಟ್ಟ. ಅಂಜಲಿ ಮಾತ್ರ ಅವರಿಬ್ಬರ ನಡುವೆ ನಿಲ್ಲಲಿಲ್ಲ.

ಸುಹಾಸನ ಎಲ್ಲ ಪ್ರಶ್ನೆಗಳಿಗೂ ತನ್ನ ಲೋಕದಲ್ಲಷ್ಟೇ ಪ್ರಚಲಿತದಲ್ಲಿರುವ ಭಾಷೆಯಲ್ಲಿ ಉತ್ತರಿಸುವವನಂತೆ ಅಭಿಜಿತ ನಿಧಾನವಾಗಿ ತಡೆದು ಉತ್ತರಿಸುತ್ತಾ ಹೋದ. ಮೂವರು ಅದೇ ಕಬ್ಬನ್ ಪಾರ್ಕಿನಲ್ಲಿ ಸೂರ್ಯ ಇನ್ನೇನೂ ಕಣ್ಮರೆಯಾಗುವವರೆಗೂ ಕಳೆದರು. ಒಂದು ಹೊಸ ಭರವಸೆ ಬಂದವನಂತೆ ಅಂಜಲಿ ನಾನು ಮನೆಯಲ್ಲಿ ಮಾತಾಡ್ತೀನಿ, ಮದುವೆಯಾಗುವ. ಹೊಸ ಮನೆಯನ್ನು ಮಾಡ್ತೀನಿ ಅಲ್ಲಿಗೆ ಶಿಫ್ಟ್ ಆಗು. ಎಲ್ಲ ಸರಿಯಾಗುತ್ತೆ ಎಂದು ಒಂದೇ ಸಮನೇ ಹೇಳಿದ.

ಸುಹಾಸನ ಕಡೆಗೆ ತಿರುಗಿ, ಸುಹಾಸ ನೀನು ಅಮ್ಮನ ಜೊತೆ ನಮ್ಮ ಹೊಸ ಮನೆಗೆ ಬರ್ತೀಯಾ ಅಲ್ವಾ? ಎಂದು ಸಣ್ಣದಾಗಿ ಪ್ರಶ್ನಿಸಿದ. ತನ್ನ ಪಾಡಿಗೆ ತಾನು ಮತ್ತೊಂದು ಐಸ್ ಕ್ರೀಮ್ ತಿನ್ನುತ್ತಿದ್ದ ಸುಹಾಸ ತನ್ನಮ್ಮನ ಕಡೆಗೆ ತಿರುಗಿ, ಅಮ್ಮ ನೀನು ಇವರ ಮನೆಗೆ ಹೋಗ್ತೀಯಾ? ಹೂ ಇಸ್ ಹೀ? ಎಂದು ಸಣ್ಣದಾಗಿ ಕೇಳಿದ. ಎಳೆಯ ಸುಹಾಸನ ದೊಡ್ಡ ಮಾತು ಅಂಜಲಿ ಮತ್ತು ಅಭಿಜಿತನನ್ನು ಮೌನವಾಗಿಸಿತು. ಈ ಲೋಕದಲ್ಲಿ ಪ್ರತಿಯೊಂದು ಸಂಬಂಧಕ್ಕೂ ಹೆಸರೊಂದು ಇರಲೇ ಬೇಕಾ ಎನ್ನುವ ಅತಿ ಭಯಾನಕವಾದ ಪ್ರಶ್ನೆಯೊಂದನ್ನು ಎದುರಿಟ್ಟಿತ್ತು. ಸಂಜೆಯ ಸೂರ್ಯ ಈಗ ಕಂತಿಹೋಗಿದ್ದ. ಸುಹಾಸನಿಗೆ ಸಹಜವಾದ ಪ್ರಶ್ನೆಯಿತ್ತು. ಅಂಜಲಿ ಮತ್ತು ಅಭಿಜಿತ ಅದೊಂದು ಸಣ್ಣ ಪ್ರಶ್ನೆ ತಮಗೆ ಮುಂದೊಂದು ದಿನ ಎದುರಾಗಬಹುದು ಎನ್ನುವ ಅಂದಾಜೂ ಇರದೆ ಕಳೆದು ಹೋಗಿದ್ದರು. ಪ್ರಶ್ನೆ ಇಬ್ಬರನ್ನೂ ಸುಡಲು ಆರಂಭಿಸಿದಂತೆ ಸಂಜೆಯ ಸೂರ್ಯ ಕಂತುವಂತೆ ಇಬ್ಬರೂ ಸುಹಾಸನ ಎದುರು ಒಬ್ಬರಲೊಬ್ಬರು ಕಂತತೊಡಗಿದರು.

●